ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 11-03-2020.

**ಪಾಟೀ ಸವಾಲು – ವಾದಿ ಪರಃ ಶ್ರೀ ಪಿ.ಸಿ.ಎಸ್. ವಕೀಲರಿಂದ.**

1) ಮಲ್ಲಾರೆಪ್ಪ ಕುಂಚೂರ ಇವರಿಗೆ 6 ಜನ ಮಕ್ಕಳು. ಅವರೆಂದರೆ ಸಂಕಮ್ಮ, ಕಸ್ತೂರಮ್ಮ, ಶಾರಮ್ಮ, ಲಕ್ಷ್ಮಮ್ಮ, ಗುಡ್ಡಪ್ಪ ಮತ್ತು ಚಂದ್ರಶೇಖರ. ಇವರಲ್ಲಿ ಹೆಣ್ಣುಮಕ್ಕಳು ಮಲ್ಲಾರೆಪ್ಪನ ಜೀವಿತ ಅವಧಿಯಲ್ಲಿ ಮದುವೆ ಮಾಡಿಕೊಂಡು ಹೋಗಿರುತ್ತಾರೆಂದರೆ ಸರಿ. ಮಲ್ಲಾರೆಪ್ಪ ತನ್ನ ಜೀವಿತತ ಅವಧಿಯಲ್ಲಿ ಆಸ್ತಿಗಳನ್ನು ಖರೀದಿಸಿದ್ದರು. ಸರ್ವೆ ನಂ. 128 ಅ, 128 ಬ ಹಾಗೂ ಬ್ಯಾಡಗಿಯಲ್ಲಿ ಸಿ.ಟಿ.ಎಸ್.ನಂ. 1360/909 ಇವುಗಳನ್ನು ಖರೀದಿಸಿದ್ದರು. ಸದರಿ ಆಸ್ತಿಗಳನ್ನು ಹೊರತುಪಡಿಸಿ ಮಲ್ಲಾರೆಪ್ಪ ತನ್ನ ಜೀವಿತ ಅವಧಿಯಲ್ಲಿ ಬೇರೆ ಯಾವುದೇ ಆಸ್ತಿಗಳನ್ನು ಖರೀದಿಸಿರಲಿಲ್ಲ ಎಂದರೆ ಸರಿ.

2) ಮಲ್ಲಾರೆಪ್ಪ ಅಂದಾಜು 20 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಮಲ್ಲಾರೆಪ್ಪ ಜೀವಂತ ಇದ್ದಾಗ ಅವರ ಆಸ್ತಿಗಳಲ್ಲಿ ಹಿಸ್ಸೆ-ದಿಸ್ಸೆ ಆಗಿತ್ತು. ಸಾಕ್ಷಿ ಮುಂದುವರೆದು ವ್ಯವಸಾಯದ ಜಮೀನುಗಳಲ್ಲಿ ಹಿಸ್ಸೆ ಆಗಿತ್ತು ಎಂದು ಉತ್ತರಿಸುತ್ತಾರೆ. ಹಿಸ್ಸೆ ಆಗುವ ಕಾಲಕ್ಕೆ ಯಾವುದೇ ದಾಖಲೆಗಳು ಆಗಿರಲಿಲ್ಲ. ಅಪ್ಪಾಸ್ ನಲ್ಲಿ ಹಿಸ್ಸೆ ಆಗಿತ್ತು ಎಂದು ಉತ್ತರಿಸುತ್ತಾರೆ. ಕೃಷಿ ಇಲಾಖೆಯಿಂದ ಸಬ್ಸಿಡಿ ಪಡೆಯುವ ಸಲುವಾಗಿ ಸಣ್ಣ ಹಿಡುವಳಿದಾರರಾಗಿ ಹಿಸ್ಸೆ ಮಾಡಿಕೆಂಡಿದ್ದೆವು. ಈ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ.

3) ರಿ.ಸ.ನಂ. 128 ಅ, ಕ್ಷೇತ್ರ 3 ಎಕರೆ 15 ಗುಂಟೆ ಇರುತ್ತದೆ. ಸಣ್ಣ ಹಿಡುವಳಿದಾರರೆಂದು ಮಾಡಿಕೊಳ್ಳುವದಕ್ಕಿಂತ ಮುಂಚೆ ಸದರಿ ಜಮೀನಿನ ಸರ್ವೆ ನಂ. 128/1 ಇದ್ದು, ಅದು 7 ಎಕರೆ 15 ಗುಂಟೆ ಇತ್ತು ಎಂದರೆ ಸರಿ. ಸಣ್ಣ ಹಿಡುವಳಿದಾರರೆಂದು ಮಾಡಿಕೊಳ್ಳುವ ಸಲುವಾಗಿ ಈ ಜಮೀನಿನಲ್ಲಿ ವಾಟ್ನಿ ಆಗಿರುತ್ತದೆ ಎಂದರೆ ಸರಿ. ಈ ವಾಟ್ನಿ ಪ್ರಕಾರ ನಾನು ನನ್ನ ತಂದೆ ಗುಡ್ಡಪ್ಪ ಸೇರಿ ವರ್ದಿ ಕೊಟ್ಟು ನಮ್ಮ ಹೆಸರನ್ನು ದಾಖಲಸಿಕೊಂಡಿರುತ್ತೇವೆಂದರೆ ಸರಿ. ಸಾಕ್ಷಿ ಸದರಿ ವರ್ದಿ ನಿಪಿ-12 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರತಿಸಿದ್ದು, ಅದನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸದರಿ ವರ್ದಿಯ ಮೇಲೆ ಇರುವ ತನ್ನ ತಂದೆ ಮಲ್ಲಾರೆಪ್ಪ ಹಾಗೂ ತನ್ನ ಅಣ್ಣ ಗುಡ್ಡಪ್ಪ ಇವರ ಸಹಿಗಳನ್ನು ಹಾಗೂ ಕಬೂಲ್ ನೀಡಿದ ಶಾವಕ್ಕ, ಕಸ್ತೂರಬಾಯಿ ಮತ್ತು ಶಾರದಮ್ಮ ಇವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

4) ನಿಪಿ-12 ರಲ್ಲಿ ಎಲ್ಲಿಯೂ ಚಿಕ್ಕ ಹಿಡುವಳಿದಾರರ ಸಲುವಾಗಿ ವಾಟ್ನಿ ಮಾಡಿಕೊಳ್ಳುತ್ತಿದ್ದೇವೆಂದು ನಮೂದಿಸಿಲ್ಲ ಎಂದರೆ ಸರಿ. ಸದರಿ ವರದಿಯ ಆಧಾರದ ಮೇಲೆ ನೀಡಿದ ಯೂ-ಫಾರ್ಮ್‌ಗೆ ಕೂಡ ನಾವೆಲ್ಲರೂ ಸಹಿ ಮಾಡಿರುತ್ತೇವೆಂದರೆ ಸರಿ. ನಿಪಿ-20 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು

ನಿಪಿ-20 ರ ಮೇಲೆ ಮಾಡಿದ ಉಳಿದವರ ಸಹಿಗಳನ್ನು ಕೂಡ ನೋಡಿ ಗುರುತಿಸಿರುತ್ತಾರೆ. ಈ ಮೇಲೆ ಹೇಳಿದಂತೆ ನೀಡಿದ ವರದಿಯ ಪ್ರಕಾರ ಡ.ನಂ. 6227 ರಂತೆ ನನ್ನ ಮತ್ತು ನನ್ನ ಅಣ್ಣನ ನಡುವೆ ವಾಟ್ನ ಆಗಿರುತ್ತದೆ ಎಂದರೆ ಸರಿ. ಸದರಿ ಡ.ನಂ. 6227 ಇದು ಇಂದಿಗೂ ಕೂಡ ಚಾಲ್ತಿಯಲ್ಲಿದ್ದು, ರದ್ದಾಗಿರುವುದಿಲ್ಲ ಎಂದರೆ ಸರಿ.

5) ಡ.ನಂ. 6227 ರಂತೆ ರಿ.ಸ.ನಂ. 128/1 ಇದು ಪೋಡ್ ಆಗಿ ರಿ.ಸ.ನಂ. 128/1 ಅ ಮತ್ತು ರಿ.ಸ.ನಂ. 128/1 ಬ ಎಂದು ಆಗಿರುತ್ತದೆ ಎಂದರೆ ಸರಿ. ರಿ.ಸ.ನಂ. 128/1 ಅ, 3 ಎಕರೆ 15 ಗುಂಟೆ ಜಮೀನಿಗೆ ನನ್ನ ಅಣ್ಣ ಗುಡ್ಡಪ್ಪನ ಹೆಸರು ರಿ.ಸ.ನಂ. 128/1 ಬ, 4 ಎಕರೆ ಜಮೀನಿಗೆ ನನ್ನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪೋಡ್ ಆದ ನಂತರ ಎಮ್.ಆರ್.ನಂ. 6566 ಇದು ದಾಖಲಾಗಿದ್ದು, ಅದು ಕೂಡ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ಡ.ನಂ. 6227 ಮತ್ತು ಡ.ನಂ. 6566 ಇವುಗಳನ್ನು ನಾನು ಇಲ್ಲಿಯವರೆಗೂ ಪ್ರಶ್ನಿಸಿಲ್ಲ ಎಂದರೆ ಸರಿ.

6) ನನ್ನ ಅಣ್ಣ ಗುಡ್ಡಪ್ಪ 1999 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಮಾಡಿಕೊಂಡ ವಾಟ್ನಿ ಮೇರೆಗೆ ನಾನು ಹಾಗೂ ನನ್ನ ಅಣ್ಣ ಬೇರೆ-ಬೇರೆ ವಾಸಮಾಡುತ್ತಿದ್ದೇವೆಂದರೆ ಸರಿಯಲ್ಲ. ನಾನು ಹಾಗೂ ನನ್ನ ಅಣ್ಣ ಜೊತೆಯಲ್ಲಿ ಕೂಡಿ ವಾಸವಿರುತ್ತೇವೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ಕೂಡಿ ಇದ್ದೆವು ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 2001 ರಲ್ಲಿ ನಾವು ಬೇರೆ-ಬೇರೆ ಆಗಿರುತ್ತೇವೆ. ನಾವು ಮಲ್ಲಾರೆಪ್ಪ ಜೀವಂತ ಇದ್ದಾಗ 1987 ರಲ್ಲಿ ವಾಟ್ನಿ ಮಾಡಿಕೊಂಡು ಬೇರೆ-ಬೇರೆಯಾಗಿರುತ್ತೇವೆಂದರೆ ಸರಿಯಲ್ಲ.

7) ನಾವು ಬೇರೆಯಾದ ನಂತರ ನನ್ನ ಅಣ್ಣ ಗುಡ್ಡಪ್ಪ ಬ್ಯಾಡಗಿ ಹಳೇ ಸಿಂಡಿಕೇಟ್ ಬ್ಯಾಂಕ್ ಮುಂದೆ ಮುಖ್ಯ ರಸ್ತೆಯಲ್ಲಿ ಸ್ಟೇಶನರಿ ಅಂಗಡಿ ಇಟ್ಟುಕೊಂಡು ಅಲ್ಲಿಯೇ ವಾಸವಿದ್ದ ಎಂದರೆ ಸರಿಯಲ್ಲ. ಸದರಿ ಸ್ಟೇಶನರಿ ಅಂಗಡಿ ಈಗ ಗುಡ್ಡಪ್ಪನ ಸ್ಟೇಶನರಿ ಅಂಗಡಿ ಎಂದು ಪ್ರಸಿದ್ಧಿ ಆಗಿದ್ದು ಅದನ್ನು ಈಗ ಗುಡ್ಡಪ್ಪನ ಮಕ್ಕಳು ನಡೆಸಿಕೊಂಡು ಹೋಗುತ್ತಿದ್ದಾರೆಂದರೆ ಸರಿ. ಸದರಿ ಸ್ಟೇಶನರಿ ಅಂಗಡಿಯಲ್ಲಿ ನನ್ನ ಹಿಸ್ಸೆ ಇಲ್ಲ ಎಂದರೆ ಸಾಕ್ಷಿ ಅದನ್ನು ಇಬ್ಬರೂ ಸೇರಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಅಂಗಡಿಗೆ ನಾನು ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

8) ಸದರಿ ಸ್ಟೇಶನರಿ ಅಂಗಡಿ 40-45 ವರ್ಷಗಳಿಂದ ಇರುತ್ತದೆ. ಸದರಿ ಸ್ಟೇಶನರಿ ಅಂಗಡಿಯನ್ನು ಯಾರ ಕಟ್ಟಡದಲದ್ಲಿ ನಡೆಸುತ್ತಿದ್ದಾರೆ ಮತ್ತು ಸದರಿ ಅಂಗಡಿ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ಸದರಿ ಸ್ಟೇಶನರಿ ಅಂಗಡಿಯನ್ನು ಗುಡ್ಡಪ್ಪ ಒಬ್ಬನೆ ನಡೆಸುತ್ತಿದ್ದ ಎಂದು ಹೇಳಿದರೆ ನಾವು ವಾಟ್ನಿ ಮಾಡಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು).
(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸರಿ ಅದೆ.

ಸಹಿ
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.